ಇ) 2001ನೇ ಸಾಲಿನ ಜನಗಣತಿ ಆಧಾರದ ಮೇಲೆ ಪಡಿತರ ಚೀಟಿ ಸಮೀಕ್ಷೆ ಯೋಗ್ಯವಾಗಿದ್ದರೂ ಆರ್ಥಿಕ ಗಣತಿ ಆಧಾರ ಮೇಲೆ ಪುನ: ಸಮೀಕ್ಷೆ ನಡೆಸಿರುವುದು ಸರಿಯೆ;

ಈ) ಹಾಗಿದ್ದಲ್ಲಿ ಮೊದಲು ಜಾರಿಯಲ್ಲಿದ್ದ ಪಡಿತರ ಚೀಟಿಗಳ ಸಮೀಕ್ಷೆ ಪ್ರಕಾರ ಸರಕಾರ ಕ್ರಮ ಕೈಗೊಂಡು ಜುಲೈ 2005ರಲ್ಲಿ ಹಳದಿ ಪಡಿತರ ಚೀಟಿ ಹೊಂದಿದವರಿಗೆ ಅಕ್ಕಿ ಮತ್ತು ಗೋಧಿಯನ್ನು ಬಿಡುಗಡೆಗೊಳಿಸದೇ ಇರಲು ಕಾರಣವೇನು;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ/ಕೈಗೊಳ್ಳಲಿರುವ ಕ್ರಮಗಳೇನು

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು, ಮತ್ತು ಗ್ರಾಮೀಣ ಮತ್ತು ನೀರು ಸರಬರಾಜು ಸಚಿವರು) :

ಅ. ಇಲ್ಲ.

ಆ. ಸರ್ಕಾರದ ಪ್ರಚಲಿತ ನೀತಿಯಿಂದ ಅನುಸಾರ ಬಿಳಿ ಸೀಮೆಎಣ್ಣೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಇ. ಕೇಂದ್ರ ಸರ್ಕಾರದ 2001ರ ಜನಗಣತಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿರುವುದಿಲ್ಲ. ಪಡಿತರ ವ್ಯವಸ್ಥೆಯಯಲ್ಲಿ ಅನೇಕ ಅರ್ಹರು ಪಡಿತರ ಚೀಟಿಯನ್ನು ಪಡೆಯದೇ ಹಾಗು ಅನರ್ಹರು ಬಿಪಿಎಲ್ ಪಡೆತರ ಚೀಟಿಯನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಲಾಗಿರುತ್ತದೆ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

121 (251) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) (ಕೃಷಿ ಮಾರುಕಟ್ಟೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸವಣೂರೂ ತಾಲ್ಲೂಕು ಕಡಕೋಳ ಗ್ರಾಮದಲ್ಲಿ ಉಪ ಮಾರುಕಟ್ಟೆಯಲ್ಲಿ ಈವರೆಗೂ ಯಾವುದೇ ವ್ಯಾಪಾರ ವಹಿವಾಟು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಕಡಕೋಳ ಉಪ ಮಾರುಕಟ್ಟೆಯ ಜಮೀನು ಖರೀದಿಗೆ ಸವಣೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂ.ಗಳನ್ನು ವಿನಿಯೋಗಿಸಿ ಖರೀದಿಸಿದ್ದುದರಿಂದ ಸವಣೂರು ಮಾರುಕಟ್ಟೆಗೆ ತುಂಬಾ ಹೊರ ಯಾಗಿರುವುದಿಲ್ಲವೆ;

ಇ. ವ್ಯಾಪಾರ ವಹಿವಾಟು ಇಲ್ಲದಿರುವ ಉಪ ಮಾರುಕಟ್ಟೆ ನಿವೇಶನಗನಳನ್ನು ಖಾಸಗಿಯವರಿಗೆ ಮರು ಮಾರಾಟಾ ಮಾಡಿ ಸವಣೂರ ಮಾರುಕಟ್ಟೆ ಮೇಲಿರುವ ಹೊರೆಯನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ. ಬಂದಿದೆ.

ಆ. ರೈತ ಬೆಳೆಗಾರರಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಉಪ ಮಾರುಕಟ್ಟೆಗೆ ಜಮೀನು ಖರೀದಿಸಿದೆ.

ಇ. ಇಲ್ಲ.